**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 09.08.2024
ಪಾಟಿ ಸವಾಲು : ಪ್ರತಿವಾದಿ ಪರ ವಕೀಲರಿಂದ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಲೀಗಲ್ ನೋಟೀಸ್ ನಲ್ಲಿ ಪ್ರನೋಟ್ ಬರೆದವರು ಯಾರು ಮತ್ತು ಪ್ರನೋಟ್ ನಲ್ಲಿ ಸಾಕ್ಷಿದಾರರು ಯಾರೆಂದು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೋಟೀಸ ನೀಡಿದ ನಂತರ ಪ್ರನೋಟ್ ಬರೆಸಿರುತ್ತೀರಾ ಅಥವಾ ನೋಟೀಸ್ ನೀಡುವ ಮುಂಚೆ ಪ್ರನೋಟ್ ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಟೀಸ್ ನೀಡುವ ಮುಂಚೆಯೇ ಪ್ರನೋಟ್ ಬರೆಸಿ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಹಣ ನೀಡುವ ಸಂದರ್ಭದಲ್ಲಿ ಕೃಷ್ಣ ಮತ್ತು ಪರಮೇಶ್ ರವರು ಇದ್ದರು. ಪ್ರನೋಟ್ ಅನ್ನು ಹುಲಿಕೆರೆ ಗ್ರಾಮದಲ್ಲಿ ಬರೆಸಿರುತ್ತೇವೆ. ಹಣ ನೀಡಿದಾಗ ಸಮಯ ರಾತ್ರಿ 08.00 ಗಂಟೆಯಾಗಿತ್ತು. ಪ್ರನೋಟ್ ಬರೆಸಿದಾಗ ಸಮಯ ರಾತ್ರಿ 07.00 ಗಂಟೆಯಾಗಿತ್ತು. ನಾನು ಯಾವುದೇಹಣ ನೀಡಿರುವುದಿಲ್ಲವೆಂದರೆ ಸರಿಯಲ್ಲ. ಪ್ರನೋಟ್ ಅನ್ನು ನಾನು ಸೃಷ್ಟಿಸಿ ಈ ಸುಳ್ಳು ಪ್ರಕರಣವನ್ನು ದಾಖಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಪ್ರನೋಟ್ ನಲ್ಲಿ ತಿಳಿಸಿರುವ ಹಣವನ್ನು ನೀಡಲು ನನಗೆ ಆರ್ಥಿಕ ಚೈತನ್ಯ ಇಲ್ಲವೆಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇರುತ್ತದೆ. ಅದು ಹಸಿರು ಪಡಿತರ ಚೀಟಿ ಇರುತ್ತದೆ. ಹಸಿರು ಪಡಿತರ ಚೀಟಿ ಬಡವರಿಗೆ ನೀಡುತ್ತಾರೆ ಎಂದರೆ ಸರಿ. ನೀವು ಯಾವುದೇ ಹಣವನ್ನು ಪ್ರತಿವಾದಿಗೆ ನೀಡದೇ ಇರುವ ಕಾರಣ ನೀವು ವಾದ ಪತ್ರದಲ್ಲಿ ತಿಳಿಸಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.